ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಸ್ವಚ್ಛ ಸಂಕೀರ್ಣ ಜಲೋತ್ಸವ ಮನೆ ಮನೆಗೆ ಗಂಗೆ ಜಲ ಜೀವನ ಮಿಷನ್

# ಗ್ರಾಮೀಣ ಜನರ ಸಮಯ ಉಳಿಸುತ್ತಿದೆ ಕಾರ್ಯಾತ್ಮಕ ನಳ ಸಂಪರ್ಕ




ಬಳ್ಳಾರಿ ಜಿಲ್ಲೆಯು 5 ತಾಲ್ಲೂಕು ಪಂಚಾಯಿತಿ ಹಾಗೂ 100 ಗ್ರಾಮ ಪಂಚಾಯಿತಿಗಳನ್ನು ಹೊಂದಿದೆ. ಇಲ್ಲಿನ ಕುರುಗೋಡು ತಾಲ್ಲೂಕಿನ ಕಲ್ಲುಕಂಭ ಗ್ರಾಮ ಪಂಚಾಯಿತಿಯ ಕೆರೆಕೆರೆ ಗ್ರಾಮವು ಒಟ್ಟು 309 ಮನೆಗಳು ಹಾಗೂ 1342 ಜನಸಂಖ್ಯೆ ಹೊಂದಿದೆ.

ಜಲ ಜೀವನ್ ಮಿಷನ್ ಯೋಜನೆಯು ಜಾರಿಯಾಗುವುದಕ್ಕೂ ಮುಂಚೆ ಕೆರೆಕೆರೆ ಗ್ರಾಮದಲ್ಲಿ ಕೇವಲ 20 ರಿಂದ 30 ಮನೆಗಳು ನಳ ಸಂಪರ್ಕವನ್ನು ಹೊಂದಿದ್ದವು. ಉಳಿದ ಕುಟುಂಬಗಳು ಕುಡಿಯುವ ನೀರಿಗಾಗಿ ಪ್ರತಿದಿನ ಪರದಾಡುತ್ತಿದ್ದರು. ಊರಿನಲ್ಲಿದ್ದ ಎರಡು ಕೊಳವೆ ಬಾವಿಗಳನ್ನೆ ಹೆಚ್ಚಿನ ಕುಟುಂಬಗಳು ಅವಲಂಬಿಸಿದ್ದವು. ಗ್ರಾಮಸ್ಥರು ಎಲ್ಲಾ ಕೆಲಸ ಬಿಟ್ಟು ಕುಡಿಯುವ ನೀರಿಗಾಗಿ ಕಾಯುತ್ತಾ ಕೂರುವ ಪರಿಸ್ಥಿತಿಯಿತ್ತು. ಇದರಿಂದ ಇತರೆ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತಿತ್ತು. ಅದರಲ್ಲೂ ಮಹಿಳೆಯರು ಸಾಕಷ್ಟು ಕಷ್ಟ ಅನುಭವಿಸುತ್ತಿದ್ದರು.



ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಹಲವಾರು ಸವಾಲುಗಳು ಎದುರಾದವು. ಗ್ರಾಮಸ್ಥರು ಮೀಟರ್ ಅಳವಡಿಕೆಯಿಂದ ನೀರಿನ ತೆರಿಗೆ ಹೆಚ್ಚಾಗುತ್ತದೆ ಎಂಬ ಅಭಿಪ್ರಾಯ ಹೊಂದಿದ್ದರು. ಪ್ರಷರ್ ಕಂಟ್ರೋಲ್ ವಾಲ್ವ್ ಗಳ ಅಳವಡಿಕೆಯಿಂದ ನಳದಲ್ಲಿ ನೀರಿನ ಪ್ರಮಾಣ ಕಡಿಮೆಯಾಗಲಿದೆ ಎಂದು ಭಾವಿಸಿದ್ದರು. ಸಮುದಾಯ ವಂತಿಕೆ ಸಂಗ್ರಹಣೆಯ ಸಮಯದಲ್ಲಿ ಜನರು ಮೊದಲಿಗೆ ಅಸಹಕಾರ ತೋರಿದ್ದರು.

ಸವಾಲುಗಳನ್ನು ಎದುರಿಸಲು ಅನುಷ್ಠಾನ ಬೆಂಬಲ ಸಂಸ್ಥೆಗಳ ಸಹಕಾರದೊಂದಿಗೆ ವಿವಿಧ ಮಾಹಿತಿ ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಗಳ ಮೂಲಕ ನೀರು ಮತ್ತು ನೈರ್ಮಲ್ಯದ ಕುರಿತು ಜಾಗೃತಿ ಮೂಡಿಸಲಾಯಿತು. ಗ್ರಾಮದಲ್ಲಿ ವಿಶೇಷ ಗ್ರಾಮ ಸಭೆಯ ಮೂಲಕ ಮೀಟರ್ ಮತ್ತು ಪ್ರಷರ್ ಕಂಟ್ರೋಲ್ ವಾಲ್ವ ಗಳ ಅಳವಡಿಕೆಯ ಉದ್ದೇಶಗಳ ಬಗ್ಗೆ ಗ್ರಾಮಸ್ಥರಿಗೆ ತಿಳಿಸಲಾಯಿತು.

ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳು, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಗ್ರಾ.ಪಂ. ಸಿಬ್ಬಂದಿ ವರ್ಗ, ಸ್ವ ಸಹಾಯ ಸಂಘದ ಒಕ್ಕೂಟದ ಸದಸ್ಯರು, ಆಶಾ/ಅಂಗನವಾಡಿ ಕಾರ್ಯಕರ್ತೆಯರು ಗ್ರಾಮಸ್ಥರಲ್ಲಿ ಜಾಗೃತಿ ಮೂಡಿಸಲು ಸಕ್ರಿಯವಾಗಿ ಭಾಗವಹಿಸಿದರು. ಮಾಹಿತಿ ಶಿಕ್ಷಣ ಹಾಗೂ ಸಂವಹನ ಚಟುವಟಿಕೆಗಳು ಮತ್ತು ಸಾಮಾರ್ಥ್ಯಭಿವೃದ್ಧಿ ಚಟುವಟಿಕೆಗಳ ಮೂಲಕ ಜನರಲ್ಲಿ ಅರಿವು ಮೂಡಿಸಿ ಗ್ರಾಮಸ್ಥರ ಸಹಕಾರದ ಮೂಲಕ ಜಲ ಜೀವನ್ ಮಿಷನ್ ಯೋಜನೆಯನ್ನು 65 ಲಕ್ಷಗಳ ವೆಚ್ಚದಲ್ಲಿ ಗ್ರಾಮದಲ್ಲಿ ಅನುಷ್ಠಾನಗೊಳಿಸಲಾಯಿತು.

ಯೋಜನೆಯ ಕುರಿತು ಗ್ರಾಮದ ಮಹಿಳೆ ಶ್ರೀಮತಿ ರೇಖಾ ಅವರು ಸಂತಸ ವ್ಯಕ್ತಪಡಿಸಿದ್ದಾರೆ. "ಈ ಹಿಂದೆ ಬಹಳ ದೂರದಿಂದ ನೀರನ್ನು ತರುತ್ತಿದ್ದೆವು. ಬೆಳಿಗ್ಗೆ ಮತ್ತು ಸಂಜೆ ಹೊತ್ತಲ್ಲಿ ನೀರಿಗಾಗಿ ಗಂಟೆಗಟ್ಟಲೆ ಸರತಿ ಸಾಲಿನಲ್ಲಿ ನಿಂತು ನೀರು ತರಬೇಕಾಗಿತ್ತು. ಇದರಿಂದ ಮನೆಯಲ್ಲಿ ಸರಿಯಾದ ಸಮಯಕ್ಕೆ ಅಡುಗೆ ಮಾಡುವುದಕ್ಕೂ ಸಾಧ್ಯವಾಗುತ್ತಿರಲಿಲ್ಲ. ಮನೆಯವರಿಗೆಲ್ಲಾ ನೀರು ತರುವುದು ದೊಡ್ಡ ಕೆಲಸವಾಗಿತ್ತು. ಈಗ ಯೋಜನೆಯು ಜಾರಿಯಾದ ನಂತರ ಮನೆ ಮನೆಗೂ ನಳ ಸಂಪರ್ಕವನ್ನು ಕಲ್ಪಿಸಿರುವುದರಿಂದ ಎಲ್ಲರು ನೆಮ್ಮದಿಯಿಂದ ಇದ್ದೇವೆ. ಹೊಲ ಗದ್ದೆಗಳಲ್ಲಿ ಕೆಲಸ ಮಾಡುವಾಗಲೂ ನಾವು ಜಲ ಜೀವನ್ ಮಿಷನ್ ಯೋಜನೆಯನ್ನು ನೆನಸಿಕೊಂಡು ಧನ್ಯವಾದ ಅರ್ಪಿಸುತ್ತೇವೆ".







ಚಟುವಟಿಕೆಯ ಸುಸ್ಥಿರತೆಗಾಗಿ ಹಲವಾರು ಉಪಕ್ರಮಗಳನ್ನು ಕೈಗೊಳ್ಳಲಾಗಿದೆ. ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿಯ ಸದಸ್ಯರಿಗೆ ಜಲ ಜೀವನ್ ಮಿಷನ್ ಯೋಜನೆಯ ಕಾರ್ಯಾಚರಣೆ ಮತ್ತು ನಿರ್ವಹಣೆ ಬಗ್ಗೆ ತರಬೇತಿಯನ್ನು ನೀಡಲಾಗಿದೆ. ಸಮಿತಿಯ ಮಹಿಳಾ ಸದಸ್ಯರಿಗೆ ಕ್ಷೇತ್ರ ಪರೀಕ್ಷಾ ಕಿಟ್ ಮೂಲಕ ನೀರಿನ ಪರೀಕ್ಷೆ ಮಾಡುವುದನ್ನು ತರಬೇತಿ ನೀಡಲಾಗಿದೆ. ಆಶಾ, ಅಂಗನವಾಡಿ ಕಾರ್ಯಕರ್ತೆಯರು ನೀರಿನ ಪರೀಕ್ಷೆ ಮಾಡಿ, ಗ್ರಾಮಸ್ಥರಿಗೆ ಮಾಹಿತಿ ನೀಡುತ್ತಿದ್ದಾರೆ. ಕಾರ್ಯಾತ್ಮಕ ನಳ ಸಂಪರ್ಕ ಕಲ್ಪಿಸುವಾಗ ಅಳವಡಿಸಿದ ಮೀಟರ್, ನಳ, ವಾಲ್ವ್ ಗಳ ಸಂರಕ್ಷಣೆ ಮತ್ತು ದೀರ್ಘ ಬಾಳಿಕೆಗಾಗಿ ಮಾಹಿತಿ, ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳ ಮೂಲಕ ಗ್ರಾಮಸ್ಥರಿಗೆ ಜಾಗೃತಿ ಮೂಡಿಸಲಾಗಿದೆ. ನೀರಿನ ಮಿತ ಹಾಗೂ ಮರುಬಳಕೆ ಬಗ್ಗೆ ಗ್ರಾಮಸ್ಥರಿಗೆ ಮನವರಿಕೆ ಮಾಡಲಾಗಿದೆ.

ಜಲ ಜೀವನ್ ಮಿಷನ್ ಮಹತ್ವದ ಯೋಜನೆಯಾಗಿದ್ದು, ಗ್ರಾಮೀಣ ಮನೆಗಳಿಗೆ ಕಾರ್ಯಾತ್ಮಕ ನಳ ಸಂಪರ್ಕ ಒದಗಿಸುವ ಜೊತೆಗೆ ಸ್ಥಳೀಯ ಜಲ ಸಂಪನ್ಮೂಲಗಳ ಸಮಗ್ರ ಸ್ವಚ್ಛತೆ ಮತ್ತು ಅಭಿವೃದ್ಧಿಗೆ ಉತ್ತೇಜನ ನೀಡುತ್ತಿದೆ.

**ನೀರು ಮತ್ತು ನೈರ್ಮಲ್ಯ ಕುರಿತ ಸಮಸ್ಯೆಗಳಿಗೆ**
**ಪರಿಹಾರ ಸಹಾಯವಾಣಿ 9480985555 ಗೆ ಕರೆ ಮಾಡಿ**